

ಮಾಧ್ಯಮದಲ್ಲಿ ಏಗಬಹುದು ಎನ್ನುವ ಭರವಸೆ ಅವರಿಗೆ ಮೂಡಿತು. ಈಗ ಅವರ ಯೂಟ್ಯೂಬ್ ಚಾನಲ್‌ಗೆ ಸುಮಾರು ಆರೂವರೆ ಲಕ್ಷ ಚಂದಾದಾರರು ಇದ್ದಾರೆ.

‘ನಾನು ರೀಲ್ಸ್ ಮಾಡತೊಡಗಿದ್ದು, ವಿಡಿಯೊಗೆ ವಸ್ತುಗಳನ್ನು ಯೋಚಿಸಿದ್ದು ಅನುಭವದಿಂದಲೇ. ಮೊದಲೆಲ್ಲ ನಾನೇ ಕ್ಯಾಮೆರಾ ತೆಗೆದುಕೊಂಡು ಹೋಗುತ್ತಿದ್ದೆ. ಹೊಳೆದ ವಸ್ತುವನ್ನು ತಲೆಯೊಳಗೆ ಯೋಚಿಸಿ ಸ್ಕ್ರಿಪ್ಟ್ ಮಾಡಿಕೊಂಡು, ಹೇಳುತ್ತಾ ಇದ್ದೆ. ನನಗೆ ಸಿನಿಮಾಗಳಲ್ಲಿ ಮಂಡ್ಯ ಭಾಷೆ ಕೇಳಿದಾಗಲೆಲ್ಲ ಖುಷಿಯಾಗುತ್ತಿತ್ತು. ಸಿನಿಮಾಗಳಲ್ಲಿ ಒಂದು ಬಗೆಯ ಏಕರೀತಿಯ ಭಾಷೆ ಇರುತ್ತದೆ. ನಾನೂ ಮೊದಲಿಗೆ ಅದೇ ಭಾಷೆಯಲ್ಲಿ ವಿಡಿಯೊ ಮಾಡಿದೆ. ಅದು ಅಷ್ಟಾಗಿ ಓಡಲಿಲ್ಲ. ಆಮೇಲೆ ಜವಾರಿ ಭಾಷೆಯಲ್ಲಿ ವಿಡಿಯೊಗಳನ್ನು ಮಾಡತೊಡಗಿದೆ. ಅದು ಜನರಿಗೆ ಇಷ್ಟ ಆಯಿತು’ ಎಂದು ಮಲ್ಲು ತಮ್ಮ ಯೂಟ್ಯೂಬ್ ಪಯಣಕ್ಕೆ ಪ್ರವೇಶಿಕೆ ನೀಡಿದರು.

ನಾಗರಾಜ್ ಸಿಂಗಾಡಿ ಎನ್ನುವ ಕ್ಯಾಮೆರಾಮನ್ ಆಮೇಲೆ ಮಲ್ಲು ಅವರ ಈ ಪಯಣದಲ್ಲಿ ಜೊತೆಯಾದರು. ವಿಡಿಯೊಗಳ ಗುಣಮಟ್ಟವನ್ನು ಕ್ರಮೇಣ ಹೆಚ್ಚಿಸುತ್ತಾ ಹೋದರು.

ಮಲ್ಲು ಹಾಗೂ ಅವರ ತಂಡದವರು ರೂಪಿಸಿರುವ ವಿಡಿಯೊಗಳ ವೀಕ್ಷಕರಲ್ಲಿ ಶೇ. 40ರಷ್ಟು ಬೆಂಗಳೂರಿನವರು ಎನ್ನುವುದು ವಿಶೇಷ. ಉತ್ತರ ಕರ್ನಾಟಕದವರೂ ಈ ವಿಡಿಯೊಗಳ ಮನರಂಜನೆಯನ್ನು ಒಪ್ಪಿದ್ದಾರೆ. ಅವರೆಲ್ಲ ಮಲ್ಲು ಅವರನ್ನು ಕೇಳಿಕೊಳ್ಳುವುದು ಒಂದೇ– ‘ಉತ್ತರ ಕರ್ನಾಟಕ ಶೈಲಿಯ ಬೈಗುಳಗಳನ್ನು ಬಳಸಿ, ನಮ್ಮ ಪ್ರದೇಶದ ಜನರ ಮಾನ ತೆಗೀಬೇಡಿ.’ ಸಹಜತೆಗಾಗಿ ಕೆಲವೊಮ್ಮೆ ಬೈಗುಳಗಳನ್ನು ಬಳಸಿದ ನಂತರ ಅವರಿಗೆ ಸಿಕ್ಕಿರುವ ಪ್ರತಿಕ್ರಿಯೆ ಇಂಥದ್ದು.

